ವಿಳಾಸವನ್ನಾದರೂ ಕೊಡು; ವಿದೇಶಗಳಲ್ಲಿರುವ ಒಬ್ಬನ ವಿಳಾಸವನ್ನಾದರೂ ಕೊಡು; ಇದಕ್ಕೆಲ್ಲ ಹಣ ಕೊಟ್ಟವರ ಹೆಸರು ಹೇಳು; ನೀವೆಲ್ಲ ಎಲ್ಲೆಲ್ಲಿ ಇದ್ದಿರೋ ಆ ಮನೆಗಳ ವಿಳಾಸ ಕೊಡು; ಶಸ್ತ್ರಾಸ್ತ್ರಗಳನ್ನು ಎಲ್ಲಿ ಇಟ್ಟಿದ್ದೀರಿ, ಹೇಳು... ಈ ಥರದ ಪ್ರಶ್ನೆಗಳನ್ನು ಅವರು ಕೇಳುತ್ತಲೇ ಇದ್ದರು.'

ಇದೆಲ್ಲ ನಡೆದ ದಶಕದ ನಂತರ ಲೋಹಿಯಾ ಈ ಅನುಭವ ಕುರಿತು ಬರೆಯುತ್ತಾ ಹೇಳುವ ಮಾತು: 'ಯಾವುದೇ ಅನುಭವವನ್ನು ಅದರೆಲ್ಲ ವಿವರಗಳ ಸಮೇತ ನೆನಪಿಸಿಕೊಳ್ಳುವುದಕ್ಕೆ ಹದಿಮೂರು ವರ್ಷಗಳ ಅವಧಿ ತೀರ ದೀರ್ಘವಾದದ್ದು...'

ಭಾರತದ ದೊಡ್ಡ ಚಿಂತಕ–ನಾಯಕ–ಲೇಖಕನೊಬ್ಬ ತನ್ನ ಭೀಕರ ಅನುಭವವನ್ನು ಆ ಅನುಭವದ ಆಸುಪಾಸಿನಲ್ಲೇ ಕೋರ್ಟಿನಲ್ಲಿ ದಾಖಲಿಸಿದ ವಾಸ್ತವಾನುಭವಗಳ ಹೇಳಿಕೆ; ಅದಾದ ಹದಿಮೂರು ವರ್ಷಗಳ ನಂತರ ಆತ ಆ ಇಡೀ ಅನುಭವವನ್ನು ಮರಳಿ ಮನಸ್ಸಿಗೆ ತಂದುಕೊಂಡು, ದೂರ ನಿಂತು, ತಾತ್ವೀಕರಿಸಿ, ವಸ್ತುನಿಷ್ಠವಾಗಿ ನೋಡುವ ರೀತಿ – ಇವೆರಡೂ ಲೋಹಿಯಾ ಜೀವನಯಾನದ ಮುಖ್ಯ ದಾಖಲೆಗಳಾಗಿವೆ. ಈ ಎರಡೂ ಮನೋಚಾರಿತ್ರಿಕ ಬರಹಗಳು ಎಲ್ಲ ಕಾಲದ ಲೇಖಕ, ಲೇಖಕಿಯರಿಗೂ ಬರವಣಿಗೆಯ ಮುಖ್ಯ ಪಾಠಗಳಂತೆಯೂ ಇವೆ.

ಲಾಹೋರ್ ಸೆರೆಮನೆಯ ಅನುಭವವನ್ನು ಮುಂದೆ ಲೋಹಿಯಾ 'ಆನ್ ಎಪಿಸೋಡ್ ಇನ್ ಯೋಗ' ಎಂಬ ಲೇಖನದಲ್ಲಿ ಮರುಶೋಧಿಸಿದರು. 'ಯೋಗದಲ್ಲಿ ಒಂದು ಅಧ್ಯಾಯ' ಎಂಬ ಶೀರ್ಷಿಕೆಯಡಿ ಕೆ.ವಿ. ಸುಬ್ಬಣ್ಣ ಕನ್ನಡಿಸಿರುವ ಆ ಲೇಖನದ ಭಾಗಗಳು:

'ನಾನು ಎಲ್ಲಿದ್ದೇನೆನ್ನುವುದು ನನಗೆ ತಿಳಿದಿರಲಿಲ್ಲ; ಆದರೂ ಮುಂದೆ ಏನು ಕಾದಿದೆ ಎಂಬ ಬಗ್ಗೆ ಸಂಪೂರ್ಣ ಅರಿವಿತ್ತು. ಆಗ ನನ್ನಲ್ಲಿ ಹಾದು ಹೋಗಿರಬಹುದಾಗಿದ್ದ ಆ ಹೆದರಿಕೆ, ಅಸಹಾಯಕತೆ, ಕೋಪ ಮತ್ತು ಹತಾಶೆ– ಇವುಗಳೆಲ್ಲದರ ಮಧ್ಯೆ ಹಾದು ಹೋದ ವಿಚಿತ್ರ ಕುತೂಹಲದ ಒಂದು ಎಳೆಯನ್ನು ಮಾತ್ರ ನಾನು ತಪ್ಪದೆ ಜ್ಞಾಪಿಸಿಕೊಳ್ಳಬಲ್ಲೆ; ಅಂಥ ಸನ್ನಿವೇಶಗಳಲ್ಲಿ ಕೆಲವು ಸಲ ನನಗೆ ಉಂಟಾಗುವಂಥದೇ ಜಡತ್ವ–ಜೋಮು ಹಿಡಿದಂತಾಗುವುದು– ಆಗಲೂ ಉಂಟಾದ್ದು ಸ್ಪಷ್ಟವಾಗಿ ನೆನಪಿದೆ.

ಆದರೆ, ಯಾವನೂ ಅಂಥ ಜಡ ಸ್ತಬ್ಧದ ಸನ್ನಿವೇಶದಲ್ಲೆ ಬಹಳ ಹೊತ್ತು ಇರಲಾರ; ಆದರೆ ಸೆರೆಮನೆಯಲ್ಲಿ ಏನಾದರೂ ಮಾಡಿಬಿಡುವುದಕ್ಕೂ ಅವಕಾಶವಿರುವುದಿಲ್ಲ. ಹಿಂಸ್ರ ಬಂದೀಖಾನೆಯ ಒತ್ತಡ ಅಂಥದು; ಅದು ಬಂಧನದಲ್ಲಿರುವಾತ ಕಾರ್ಯಪ್ರವೃತ್ತನಾಗುವಂತೆ ಮಾಡುವಷ್ಟು ಮಾಗುವುದೂ ಅಪರೂಪ. ಕ್ರಿಯೆಯ ಅವಕಾಶವಿರುವುದು ಸ್ವತಂತ್ರರಾಗಿರುವ ಜನಕ್ಕೆ ಮಾತ್ರ; ಕೈದಿಗಳಿಗೆ ಅದು ಅಪರೂಪವೇ.

ಆ ನಿಷೇಧಿತ ಆವರಣದ ಬಣ್ಣ ಮಾಸಿದ ಬಂದೀಖಾನೆಗಳನ್ನು ಬಿಟ್ಟರೆ ಲಾಹೋರ್ ಕೋಟೆಯ ಸೆರೆಮನೆ ಸಾಮಾನ್ಯವೆನ್ನುವಂಥದ್ದು. ಅಲ್ಲಿ ಹಿಂಸೆಯ ಯಾವುದೇ ಸಲಕರಣೆ ಹುಡುಕಿದರೂ ಕಾಣ ಸಿಕ್ಕುತ್ತಿರಲಿಲ್ಲ. ಆದರೆ ಈ ಜನ, ಈ ಹಿಂಸಕರು, ತಮ್ಮ ಕಸುಬಿನಲ್ಲಿ ನಿಷ್ಣಾತರಾಗಿದ್ದರು. ಮನುಷ್ಯ ಶರಣಾಗುತ್ತಾನೆ; ಎಂಥವನಾದರೂ, ಎಂಥ ಸಂದರ್ಭದಲ್ಲಾದರೂ ಶರಣಾಗುತ್ತಾನೆ ಎಂಬುದನ್ನು ದೀರ್ಘ ಅನುಭವದಿಂದ ತಿಳಿದುಕೊಂಡಿದ್ದರು: ಮುಖ್ಯವಾಗಿ ಆತನ ಶರೀರ ಹಾಗೂ ಮನಸ್ಸಿನ ಹಸಿ ಭಾಗವನ್ನು ಬಿಚ್ಚಿ ಚೆಲ್ಲಬೇಕು, ಅಷ್ಟೆ.

ಅವನ ಸುತ್ತ ಸ್ನೇಹಿತರು ಇಲ್ಲದಿರಲಿ; ಅಂತರಂಗ ತೋಡಿಕೊಳ್ಳಲು, ಮಾತಾಡಲು ಅಥವಾ ಬರೆದು ತಿಳಿಸಲು ಕೂಡ ಯಾರೂ ಇಲ್ಲದಿರಲಿ. ಪುಸ್ತಕ, ಕಾಗದ, ಪೆನ್ಸಿಲ್ ಏನೂ ಇರಬಾರದು. ಆಗ ಬಹುಬೇಗ ಅವನಿಗೆ ಒಂದು ವಿಷಯ ಅನುಭವಕ್ಕೆ ಬರುತ್ತದೆ: ಅದೇನೆಂದರೆ, ಸುತ್ತಣ ಪ್ರಪಂಚಕ್ಕೆ ತನ್ನ ಅಸ್ತಿತ್ವವೇ ಗೊತ್ತಿಲ್ಲ, ಅಥವಾ ಜಗತ್ತು ತನ್ನನ್ನು ಗಮನಿಸದೆ ಸಾಗುತ್ತಿದೆ. ತನ್ನ ಜೀವಿತದ ಅವಧಿಯಲ್ಲಿ ಶತ್ರುಗಳನ್ನು ಬಿಟ್ಟು, ಅದರಲ್ಲೂ ಸಂಬಳ ಕೊಟ್ಟು ತಯಾರಿಸಿದ ಶತ್ರುಗಳನ್ನು ಬಿಟ್ಟು, ಬೇರೆ ಯಾರನ್ನೂ ಕಾಣಲಾರೆ ಎಂದು ಯೋಚಿಸತೊಡಗುತ್ತಾನೆ... ಇದು ಪೊಲೀಸರ ಯೋಜನೆ.

ನನಗೆ ನೀಡಲಾಗುತ್ತಿದ್ದ ಹಿಂಸೆ ತೀರಾ ಸಣ್ಣ ರೀತಿಯಲ್ಲೆ ಶುರುವಾಯಿತು, ಪ್ರಾರಂಭದಲ್ಲಿ ಒಮ್ಮೆಲೇ ಇದ್ದಕ್ಕಿದ್ದ ಹಾಗೆ ನನ್ನನ್ನು ತೀರಾ ಸಿಟ್ಟಿಗೆಬ್ಬಿಸಿಬಿಡಬಾರದು ಎನ್ನುವಂತೆ, ಮತ್ತು ನನ್ನ ಪ್ರಕೃತಿಯ ಕುತೂಹಲ ಪ್ರವೃತ್ತಿಯನ್ನು ಹೊರಬಿಟ್ಟು ಆಡಿಸಲು ಅವಕಾಶ ಮಾಡಿಕೊಟ್ಟರೋ ಎನ್ನುವಂತೆ. ಕುತೂಹಲ ಕೆಲವು ಸಲ ಅಪಾಯಕಾರಿಯಾಗಬಲ್ಲುದು; ಅದು ಮನುಷ್ಯನನ್ನು ಅನಗತ್ಯ ಗಂಡಾಂತರದ ಸನ್ನಿವೇಶಗಳಿಗೆ ಎಳೆದೊಯ್ದು ಬಿಡುತ್ತದೆ.

... ಒಮ್ಮೊಮ್ಮೆ ನನ್ನನ್ನು ಕುರ್ಚಿಗೆ ಅಂಟಿಸಿ ಕೂಡಿಸುತ್ತಿದ್ದರು; ಒಂದೊಂದು ಶಬ್ದವನ್ನೋ ಅಥವಾ ವಾಕ್ಯವನ್ನೋ ಐವತ್ತು ಸಲ, ನೂರು ಸಲ ನನ್ನೆದುರು ಪುನರುಚ್ಚರಿಸುತ್ತಿದ್ದರು; ಬೇರೆ ಬೇರೆ ಅಳತೆಯ, ಬೇರೆ ಬೇರೆ ತೂಕದ, ಕೈಕೋಳಗಳನ್ನು ತೊಡಿಸುತ್ತಿದ್ದರು. ಯಾವುದೇ ದಿನ ತೊಡಿಸಬೇಕಾದ ಕೋಳಗಳ ಅಳತೆ ಹಾಗೂ ಭಾರವನ್ನು ಆಯ್ಕೆ ಮಾಡುವುದು ಆ ಕಾನ್‌ಸ್ಟೇಬಲ್‌ನ ಇಷ್ಟವಾಗಿರಲಿಲ್ಲ; ಹಿಂಸೆಯ ಇಡೀ ಯೋಜನೆಯಲ್ಲಿ ಅದೂ ಒಂದು ಸಣ್ಣ ವಿವರವಾಗಿ ನಿಯಂತ್ರಿತವಾಗಿತ್ತು.

ಹಿಂಸೆಯ ಎರಡು ಮತ್ತು ಮೂರನೆಯ ತಿಂಗಳುಗಳಲ್ಲಿ ನನ್ನ ಬಲವಂತ ನಿದ್ರಾಪೀಡೆಯ ಅವಧಿ ಮೂರು ಹಾಗೂ ಐದು ದಿನಗಳವರೆಗೂ ಬೆಳೆಯಿತು. ಅಕಸ್ಮಾತ್ ದೈಹಿಕವಾಗಿ ಹೋರಾಡುವ ಇಚ್ಛೆ ನನ್ನಲ್ಲಿದ್ದರೂ, ಆ ವೇಳೆಗೆ ಆ ಇಚ್ಛೆಯನ್ನು ಕಳೆದುಕೊಂಡಿದ್ದೆ. ಆ ನಾಲ್ಕು ತಿಂಗಳುಗಳ ಹಿಂಸೆಯಲ್ಲಿ ನಾನು ಹುಚ್ಚಾದದ್ದು ಎರಡು ಸಲ ಮಾತ್ರ. ಒಮ್ಮೆ, ಅಲ್ಲಿದ್ದ ಪೊಲೀಸಿನವನು ರಾಷ್ಟ್ರನಾಯಕರನ್ನು ಮತ್ತು ನನ್ನ ಸ್ನೇಹಿತರನ್ನು ತೀರ ಹೊಲಸು ಭಾಷೆಯಲ್ಲಿ ಬಯ್ಯಲು ತೊಡಗಿದ್ದು ನನ್ನ ರಕ್ತವನ್ನು ಬಿಸಿಯಾಗಿಸಿತು; ಆದರೂ ಗಾಂಧೀಜಿಯ ಹೆಸರಿನೊಡನೆ ಅವನು ಚೆಲ್ಲಾಟವಾಡಲು ಶುರು ಮಾಡುವ ತನಕ ನಾನು ಸುಮ್ಮನೇ ಇದ್ದೆ. ಕೊನೆಗೆ ಇದ್ದಕ್ಕಿದ್ದಂತೆ ನನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿಕೊಂಡು 'ಶಟಪ್!' ಎಂದು ಗುಡುಗಿದೆ.

ಯಾರೂ ಸ್ನೇಹಿತರು ಇಲ್ಲದ ಆ ಜಾಗದಲ್ಲಿ ಅಂಥ ಪ್ರತಿಕ್ರಿಯೆ ಅರ್ಥಹೀನವಾಗಿತ್ತು. ಆದರೆ ನನಗನ್ನಿಸುವಂತೆ ಇಂಥ ಪ್ರತಿಕ್ರಿಯೆಗಳನ್ನು ನಾವು ಯೋಚಿಸಿ ಲೆಕ್ಕ ಹಾಕಿ ಮಾಡುವುದಿಲ್ಲ. ಅಪರೂಪಕ್ಕೆ ಉಕ್ಕುವ ಅಂಥ ತರ್ಕಹೀನತೆಯ ವ್ಯಕ್ತಿದ್ರವ್ಯ, ಅಂದರೆ ವ್ಯಕ್ತಿ ತನ್ನ ಚರ್ಮದ

## ಕಳೆದ ಸಂಚಿಕೆಯಲ್ಲಿ



ಲೋಹಿಯಾ ರೂಪಿಸಿದ 'ಭೂಗತ ಕಾಂಗ್ರೆಸ್ ರೇಡಿಯೋ' ಪ್ರಸಾರ ಶುರುವಾಗಿ ಮೂರು ತಿಂಗಳ ನಂತರ ಒಂದು ರಾತ್ರಿ, ತಂಡದಲ್ಲಿದ್ದ ತಂತ್ರಜ್ಞನೊಬ್ಬನ ದ್ರೋಹದಿಂದಾಗಿ ಉಷಾ ಮೆಹ್ತಾ ಪೊಲೀಸರಿಗೆ ಸೆರೆಯಾದರು. ಜೈಲು ಶಿಕ್ಷೆ ಅನುಭವಿಸಿ 1946ರಲ್ಲಿ ಬಿಡುಗಡೆಯಾದ ಅವರು, ಸ್ವತಂತ್ರ ಭಾರತದಲ್ಲಿ ಮುಂಬೈ ವಿಶ್ವವಿದ್ಯಾಲಯದಲ್ಲಿ ಪೊಲಿಟಿಕಲ್ ಸೈನ್ಸ್ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸಿದರು. ಹೋರಾಟದ ಹಾದಿಯಲ್ಲಿ ಲೋಹಿಯಾ ಹಾಗೂ ಜೆ.ಪಿ. ನೇಪಾಳ ತಲುಪಿದರು. ನೇಪಾಳದ ಪೊಲೀಸರು ಬಂಧಿಸಿದರೂ, ಲೋಹಿಯಾ ಹಾಗೂ ಜೆ.ಪಿ. ಪೊಲೀಸ್ ಪಹರೆಯಿಂದ ಪಾರಾದರು. 21 ತಿಂಗಳ ಲೋಹಿಯಾರ ಭೂಗತವಾಸಕ್ಕೆ 20 ಮೇ 1944ರಂದು ತೆರೆ ಬಿತ್ತು. ಅವರನ್ನು ಲಾಹೋರ್ ಕೋಟೆಯ ಸೆರೆಮನೆಗೆ ತರಲಾಯಿತು. ಬ್ರಿಟಿಷ್ ಕಾಲದ ಲಾಹೋರ್ ಜೈಲು ಹಿಂಸೆ, ಕ್ರೌರ್ಯಗಳ ಭೀಕರ ಪ್ರಯೋಗಶಾಲೆಯಾಗಿತ್ತು. ಅದೇ ಜೈಲಿನಲ್ಲೇ ಭಗತ್‌ಸಿಂಗರನ್ನು ಗಲ್ಲಿಗೇರಿಸಲಾಗಿತ್ತು. ಲೋಹಿಯಾರನ್ನು ಲಾಹೋರ್ ಜೈಲಿಗೆ ಕರೆತರುವ ವೇಳೆಗಾಗಲೇ ಜೆ.ಪಿ. ಅಲ್ಲಿ ಬಗೆಬಗೆಯ ಹಿಂಸೆಗಳನ್ನು ಅನುಭವಿಸಿದ್ದರು.